IJCRT.ORG ISSN : 2320-2882

INTERNATIONAL JOURNAL OF CREATIVE RESEARCH THOUGHTS (IJCRT)
An International Open Access, Peer-reviewed, Refereed Journal

# ಕನ್ನಡ ಕಾವ್ಯದಲ್ಲಿ ಬುದ್ಧ-ಬದುಕಿನ ದರ್ಶನಗಳು

**ಅರುಣ್ ಕುಮಾರ್ ಎ.ವೈ**
**ಸಂಶೋಧನಾರ್ಥಿ**
**ಸಹಾಯಕ ಪ್ರಾಧ್ಯಾಪಕರು,ಕನ್ನಡ ವಿಭಾಗ**

ಕನ್ನಡ ಸಾಹಿತ್ಯಕ್ಕೆ ಪ್ರಾಚೀನವಾದ ಇತಿಹಾಸವಿದೆ.ಕನ್ನಡ ಸಾಹಿತ್ಯದಲ್ಲಿ ಕಥೆ ಕಾದಂಬರಿ ನಾಟಕ ಪ್ರಬಂಧ ವಿಮರ್ಶೆ ಈ ಎಲ್ಲ ಪ್ರಕಾರಕ್ಕಿಂತ ಕಾವ್ಯವೂ ಭಿನ್ನವಾದದ್ದು.ಹಾಗಾಗಿ ೨೦ನೇ ಶತಮಾನದಲ್ಲಿ ಕಾವ್ಯವೂ ಪಾಶ್ಚಿಮಾತ್ಯರ ಪ್ರಭಾವದಿಂದಾಗಿ ಕನ್ನಡ ಕಾವ್ಯದಲ್ಲಿ ಬದಲಾವಣೆ ಉಂಟಾಯಿತು ಇವರೆಗೂ ತ್ರಿಪದಿ ಕಂದ ಮುಂತಾದ ಶೈಲಿಯಲ್ಲಿ ಕಾವ್ಯವನ್ನು ನೋಡುತ್ತಿದ್ದೇವೂ ಆದರೆ ಮುಂದುವರೆದು ಸಾನೆಟ್ ಭಾವಗೀತೆ ದ್ವಿಪದಿಯಾಗಿ ಕಾಣಿಸಿಕೊಳ್ಳ ತೊಡಗಿತು. ಪ್ರಮುಖವಾಗಿ ಆಧುನಿಕೋತ್ತರ ಕಾಲಘಟ್ಟ ನವ್ಯ ನವ್ಯೋತ್ತರ ಕಾಲಘಟ್ಟದಲ್ಲಿ ಹೆಚ್ಚು ಸೃಜನಾತ್ಮಕವಾಗಿ ಕಾಣಿಸಿ ಕೊಳ್ಳತೊಡಗಿತು.ಹೊಸ ಹೊಸ ಸಂವೇದನೆಗಳನ್ನು ವಿವಿಧ ಆಯಾಮ ಮತ್ತು ವಿಶಿಷ್ಟವಾದ ಥೀಮ್‌ಗಳಲ್ಲಿ ಕಟ್ಟಿಕೊಡುವ ಯತ್ನಗಳು ಇಲ್ಲಿ ನಡೆದವು.ಖಡ್ಗವಾಗಲಿ ಕಾವ್ಯ ಜನರ ನೋವಿಗೆ ಮಿಡಿವ ಪ್ರಾಣಮಿತ್ರ ಎಂಬ ಘೋಷಣೆಯೊಂದಿಗೆ ಪ್ರಾರಂಭವಾದ ಬಂಡಾಯ ಮತ್ತು ದಲಿತ ಸಾಹಿತ್ಯವೂ ಶೋಷಣೆ ವಿರುದ್ಧ ಸಾಮಾಜಿಕ ಅಸಮಾನತೆ ವಿರುದ್ಧ ದನಿ ಎತ್ತಿತು.

ಇಲ್ಲಿಪ್ರಮುಖವಾಗಿ ಮಹಾನ್ ಚಿಂತಕರ ಚಿಂತನೆಗಳು ಜೀವನ ದರ್ಶನಗಳು ಪ್ರೇರಣೆಯಾಗಿ ಒದಗಿಬಂದಿತು.ಬುದ್ಧ ಬಸವ ಅಂಬೇಡ್ಕರರ ಜೀವನ ತತ್ವಚಿಂತನೆ ಪ್ರಮುಖವಾಗಿ ಕಾವ್ಯದ ವಸ್ತುಗಳಾದವೂ ಇವು ವರ್ತಮಾನದ ಸಮಸ್ಯೆ ಮತ್ತು ಅಸಮಾನತೆಗೂ ಸ್ಪಂದಿಸ ತೊಡಗಿತು.ಹಾಗಾಗಿ ಕಾವ್ಯವೂ ಮನಸ್ಸಿನಾಳದ ನೋವು ಸಂಕಟ ಅತಾಶೆ ತೊಳಲಾಟ ಇವೆಲ್ಲವೂಗಳನ್ನು ಪ್ರಕಟಿಸುವಲ್ಲಿ ಕಾವ್ಯವೂ ನಿದರ್ಶನವಾಯಿತು.ಹಾಗಾಗಿ ಮಹಾನ್ ಪುರುಷರ ಜೀವನದರ್ಶನವನ್ನು ಒಳಗೊಂಡಂತೆ ಇಲ್ಲಿ ಈ ಲೇಖನದಲ್ಲಿ ಚರ್ಚಿಸುವ ಪ್ರಯತ್ನವನ್ನು ಮಾಡಲಾಗಿದೆ.ಜಗತ್ತಿನಾದ್ಯಂತ ನೋಡಹೊರಟರೆ ಮಾನವನ ಬದುಕು ಅಂಧಕಾರ ಮೌಢ್ಯ ಹಿಂಸೆ ಮುಂತಾದಂತಹ ಸಮಸ್ಯೆಗಳಲ್ಲಿ ತುಂಬಿಹೋದಂತಹದನ್ನು ಕಾಣಬಹುದು. ಇಂತಹ ಸಮಸ್ಯೆಗಳಿಗೆ ಮಹಾನ್ ಪುರುಷರ ಜೀವನ ಚಿಂತನೆಗಳು ಬೆಳಕನ್ನು ಕೂಡ ಚೆಲ್ಲಿವೆ.

ಜಿಸಸ್ ಬುದ್ಧ ಬಸವಣ್ಣ ವಿವೇಕಾನಂದರು ಮುಂತಾದವರು ಎಂದೆ ಹೇಳಬಹುದು.ಹಾಗಾಗಿ ಅವರು ಬದುಕಿದಂತಹ ಬದಕು ಸತ್ಯ ಮತ್ತು ವಾಸ್ತವಾಂಶಗಳನ್ನು ತೆರೆದಿಡುವುದರ ಜೊತೆಗೆ ಹೊಸದಾದ ಕ್ರಾಂತಿಯೊಂದನ್ನೆ ಸೃಷ್ಟಿಸಿತು ಎಂದು ಹೇಳಿದರೆ ತಪ್ಪಾಗಲಾರದು.ಈ ಕ್ರಾಂತಿಯು ಪ್ರಮುಖವಾಗಿ ಸಾಹಿತ್ಯದಲ್ಲೆ ನಡೆಯಿತು ಈ ಹಿನ್ನೆಲ್ಲೆಯಲ್ಲಿ ನೋಡುವುದಾದರೆ ಸಾಹಿತ್ಯವೂ ಒಂದು ದೇಶ ಅಲ್ಲಿನ ಸಂಸ್ಕೃತಿ ಜನರ ಜೀವನ ಪದ್ಧತಿ ಸಂಪ್ರದಾಯ ಇವೆಲ್ಲವೂಗಳನ್ನು ಒಳಗೊಂಡಂತೆ ಸಾಹಿತ್ಯವೂ ಸಮಾಜಮುಖಿಯಾಗಿ ನಿಲ್ಲಬೇಕಾಗುತ್ತದೆ.ಹಾಗಾಗಿ ಈ ಶಿರ್ಷಿಕೆಯ ಅಡಿಯಲ್ಲಿ ಜೀವನದರ್ಶನಗಳ ಕುರಿತಂತೆ ಬರೆಯಲಾಗಿದೆ.ಅಹಿಂಸೆ ಕರುಣೆ ಪ್ರೀತಿ ಹಾದಿಯಲ್ಲೆ ಸಾಗಿದ ಬುದ್ಧ ಅವನ ಬದುಕು ತತ್ವ ಆದರ್ಶಗಳು ಮಾನವಲೋಕಕ್ಕೆ ತೀರ ಹತ್ತಿರವಾಗಿವೆ ಎಂಬುದು ಕನ್ನಡ ಕಾವ್ಯಗಳೆ ಇದಕ್ಕೆ ನೇರ ನಿದರ್ಶನವಾಗಿವೆ.ಹಾಗಾಗಿ ಕನ್ನಡ ಸಾಹಿತ್ಯದಲ್ಲಿ ಬುದ್ಧ ನಿಧಾನವಾಗಿ ಕಾಣಿಸಿ ಕೊಂಡರು ಅವನ ಕುರಿತ ಸಾಹಿತ್ಯವೂ ಜೀವಂತ ಗೊಂಡಿದೆ ಇದು ಕಾವ್ಯ ನಾಟಕ ಕಥೆ ಕಾದಂಬರಿ

ಖಂಡಕಾವ್ಯ ರೂಪದಲ್ಲಿ ಬಂದದ್ದು ಕನ್ನಡ ಸಾಹಿತ್ಯಕ್ಕೆ ಹೊಸಆಯಾಮ ಸಿಕ್ಕಿದ್ದು ಶ್ಲಾಘನೀಯವಾದದ್ದು. ಈ ಲೇಖನದಲ್ಲಿ ಕಾವ್ಯಗಳ ಹಿನ್ನೆಲೆಯಲ್ಲಿ ಜೀವನದರ್ಶನಗಳನ್ನು ನೋಡಲಾಗಿದೆ.

ಬುದ್ಧ ಮತ್ತು ಅವನ ಜೀವನದರ್ಶನಗಳನ್ನು ಈ ಮೇಲಿನಂತೆ ಕುರಿತಂತೆ ಕೆಲವು ಕನ್ನಡ ಕಾವ್ಯಗಳ ಮೂಲಕ ಈ ಕೆಳಗಿನಂತೆ ತಿಳಿಯಲಾಗಿದೆ.ಕನ್ನಡ ಸಾಹಿತ್ಯದಲ್ಲಿ ಹೊಸ ಹೊಸ ಚಿಂತನೆಯ ಮೂಲಕ ಬೆಳೆದು ಬಂದದ್ದು ನಾವು ಕಾಣುತ್ತೇವೆ.ಅದರಲ್ಲೂ ಕಾವ್ಯವೂ ಬಹಳ ಮಹತ್ತರವಾದ ಪಾತ್ರವಹಿಸಿದೆ.ಈ ನಿಟ್ಟಿನಲ್ಲಿ ಬುದ್ಧನ ಕುರಿತಾದ ಕವಿತೆಗಳನ್ನು ಗಮನಿಸುವಾಗ ಪ್ರಮುಖವಾಗಿ ಜಿ.ಪಿ ರಾಜರತ್ನಂ ರವರ ವೈಶಾಖ ಶುಕ್ಲ ಪೂರ್ಣಿಮಾ ಕೃತಿಯಿಂದಲೆ ಗಮನಿಸಬಹುದು.ಇದೇರೀತಿ ದ.ರಾ ಬೇಂದ್ರೆ ಪು.ತಿ.ನ ಕುವೆಂಪು ಡಾ.ಎಚ್ ಲಕ್ಷ್ಮೀನಾರಯಣ್ ಟಿ.ಯಲ್ಲಪ್ಪ,ಮುಂತಾದವರ ಪದ್ಯಗಳನ್ನು ಕಾಣಬಹುದಾಗಿದೆ. ಎಲ್ಲಾ ಕವಿಗಳ ಕಾವ್ಯಗಳನ್ನು ನೋಡಿದಾಗ ಎಲ್ಲಾ ಪದ್ಯಗಳಲ್ಲೂ ವಿಶಿಷ್ಟವಾದ ಸಂವೇದನೆ ಬುದ್ಧನ ಆದರ್ಶಗಳನ್ನು ಕಟ್ಟಿಕೊಡುವ ಬಗೆ , ನೋಡುವ ಕ್ರಮ ಎಲ್ಲವೂ ಕೂಡ ಗಟ್ಟಿತನಗಳನ್ನು ಹೊಂದಿವೆ. ಎಂದು ಅರಿಯಬಹುದು. ಬದುಕಿನ ಗತಿಯನ್ನೇ ವಿಶಿಷ್ಟವಾಗಿ ಕಾಣುವ ಮತ್ತು ನೋಡು ರೀತಿ ಬೇಂದ್ರೆಕವಿಯ ಬುದ್ಧ ಕವಿತೆ ಹೇಳುತ್ತದೆ.

ಜಗವೆಲ್ಲ ಮಲಗಿರಲು ಇವನೊಬ್ಬನೆದ್ದ
ಮಡದಿ ಮಗು ಮನೆ ಮಾರು ರಾಜ್ಯ ಗೀಜ್ಯ
ಹೊತ್ತಿರುವ ಉರಿಯಲಿ ಆಯಿತಾಜ್ಯ
ಹಿಂದೆ ಬಿದ್ದವು ಎಲ್ಲೋ ಕುದುರೆ ಕಾಲಾಳು
ಬಿಚ್ಚಿ ಉದುರಿತು ಎಲ್ಲೋ ಮನದಬಾಳು
ಹೊರಟ ಹೊರಟೇ ಹೊರಟ ಹೊರಟನೆತ್ತೋ
ಸಾಹಸಿಯ ಗೊತ್ತುಗುರಿ ಅವಗು ಗೊತ್ತೋ

ಬುದ್ಧನ ಬೇಂದ್ರೆಯವರ ಕವಿತೆ ಗಂಗಾವತರಣ ಸಂಕಲನದಲ್ಲಿ ಕಾಣಬಹುದಾಗಿದೆ.ಸಾಂಸಾರಿಕ ಬದುಕನ್ನೆ ತೊರೆದು ಎಲ್ಲ ಬಂಧನಗಳನ್ನು ತೊರೆದ ಬುದ್ಧ ಮನೆ ಮಗು ರಾಜ್ಯ ಹೆಂಡತಿ ಇವೆಲ್ಲ ಜಾಲಗಳಿಂದ ಬಿಡಿಸಿಕೊಂಡು ನಿಜವಾದ ಬದುಕಿಗೆ ಸರಳತೆ ಮತ್ತು ನೆಮ್ಮದಿ ಬಾಳಮುಖ್ಯ ಎಂಬುನ್ನು ಹುಡುಕ ಹೊರಟಿದ್ದಾನೆ ಬುದ್ಧನ ಸರಳ ಸ್ವಭಾವವನ್ನು ಇಲ್ಲಿ ಚಿತ್ರಿಸಿಲಾಗಿದೆ.ಬುದ್ಧ ಇಂದು ದೈಹಿಕವಾಗಿ ಬಾಹ್ಯಪ್ರಪಂಚದಲ್ಲಿ ಇಲ್ಲವಾದರೂ ಆತ ಮಾನವ ಸಂವೇದನೆಗಳನ್ನು ಸಾರಿದ್ದು ಇಂದಿಗೂ ಪ್ರಸ್ತುತವೆ ಸರಿ ಎಂಬುದು ಅದು ಎಲ್ಲಾ ಕಾಲಕ್ಕೂ ಅನ್ವಯಿಸುತ್ತದೆ.ಅವನು ತೊರೆದ ರಾತ್ರಿ ಜಗದ ಪರಿವರ್ತನೆಯೆ ಆಗಿತ್ತು ಅದೊಂದು ಸ್ಮರಿಸುವ ಮಹಾರಾತ್ರಿ ಎಂದೆ ಪ್ರಸಿದ್ಧ.

ಕಾಮ–ಕ್ರೋದವ ದಾಟಿ,ಮದ–ಮತ್ಸರವ ತುಳಿದು
ಮೋಹಲಾಭವ ಮೆಟ್ಟಿ ಅಡಿ ಕಿತ್ತಿ ಇಟ್ಟ,
ಇದೊ ತಗ್ಗು,ಅದೊ ಗುಡ್ಡ,ಅಗೋ ಮಲೆಯ ಬೆಟ್ಟ
ನೆಲ ತಳಗೆ ಬಿಟ್ಟ.

ರಾಜಕುಮಾರ ನಾದಂತವನು ಅಸೆಲಾಲಾಸೆ ವೈಭೋಗ ಜೀವನ ಇವುಗಳಲ್ಲೆ ಕಳೆಯುವಂತವನಾಗಿರುತ್ತಾನೆ.ಆದರೆ ಬುದ್ಧನು ಕೂಡ ಈ ಮೋಹ ಮದ ಮತ್ಸರ ಕ್ರೋದ ಇವೆಲ್ಲವೂಗಳ ನಡುವೆಯೆ ಇದ್ದವನು ಆದರೆ ಇವುಗಳ ನಡುವೆ ಇದ್ದರೂ ಕೂಡ ಅವನು ಯಾವಾಗಲು ಸರಳವಾದಿ. ವೈಭೋಗ ಜೀವನ ನಿರಾಕರಿಸಿದ ಕಾಮ ಕ್ರೋದ ಮತ್ಸರ ಮೋಹ ಲಾಲಸೆ ಇವೆಲ್ಲವುಗಳನ್ನು ಗೆದ್ದು ಸಾಮನ್ಯನಂತೆ ಮನುಷ್ಯ ಪ್ರಜ್ಞೆಯನ್ನ ಉಳಿಸಿಕೊಂಡು ಮಾನವ ಧರ್ಮವನ್ನು ಗೌರವಿಸಿ ಮನುಷ್ಯರನ್ನ ಪ್ರಾಣಿಗಳನ್ನ ಅಸಹಾಯಕರನ್ನು ನಿಂದಕರನ್ನು ಪ್ರೀತಿಸಿದವನು ಇವೆಲ್ಲವೂ ಕೂಡ ಬುದ್ಧನ ಬದುಕಿನ ತತ್ವಗಳೆ ಆಗಿತ್ತು.

ಹಾಗಾಗಿ ಮೌಢ್ಯ ಅಂಧಕಾರ ಕಂದಾಚರಣೆ ಇವೆಲ್ಲವೂಗಳಿಂದ ಮುಳಗಿದ ಜಗತ್ತಿಗೆ ಬೆಳಕು ಬೇಕಿದೆ ಬೆಳಕೊಂದನ್ನ ಹುಡುಕಲು ಹೊರಟ ಬುದ್ಧನ ತಾತ್ವಿಕತೆ ಮತ್ತು ವೈಚಾರಿಕತೆಯನ್ನು ಜಗತ್ತಿನ ಮುಂದೆ ಇಲ್ಲಿರುವ ವಿಷಯಗಳು ಧ್ವನಿಸುತ್ತವೆ.ಇಲ್ಲಿ ಜ್ಞಾನವನ್ನು ಪಡೆದ ವ್ಯಕ್ತಿಗೆ ಸತ್ಯಗಳನ್ನು ಕಂಡುಕೊಂಡ ವ್ಯಕ್ತಿಗೆ ಯಾವುದೆ ಜಾತಿ ಧರ್ಮ ಸಂಪ್ರದಾಯಗಳ ಬಂಧನವೂ ಇರಲಾರವೂ ಜೊತೆಗೆ ಲೋಕದಲ್ಲಿನ ದುಃಖ ಹಸಿವು ಬಡತನ ಇವೆಲ್ಲಕ್ಕೂ ಸ್ಪಂದಿಸುವ ಮನಸ್ಸಿರ ಬೇಕೆಂಬುದು ಮನಗಾಣಬಹುದಾಗಿದೆ.ಹಾಗಾಗಿ ಇಲ್ಲಿ ಬೇಂದ್ರೆಕವಿಯಂತೆ ಹೊಸ ತಲೆಮಾರಿನ ಮತ್ತೋಂದು ಕವಿಯ ಕಾವ್ಯವನ್ನ ನೋಡುವುದಾದರೆ ಡಾ.ಎಚ್ ಲಕ್ಷ್ಮೀನಾರಯಣಸ್ವಾಮಿ.ಇವರ "ಯಾರಿರಬಹುದು"ಕವಿತೆಯು ಬುದ್ಧನನ್ನು ಹುಡುಕುವ ಅದ್ಭುತವಾಗಿ ಚಿತ್ರಣಗೊಂಡಿದೆ.ಬುದ್ಧ ಎನ್ನುವುದು ಕೇವಲ ಮೂರ್ತಿಯೊ ಅಥವಾ ಹೆಸರಲ್ಲ ವಿಶ್ವವ್ಯಾಪ್ತಿಯುದ್ದಕ್ಕೂ ಮಾನವತೆಯ ಸ್ವರೂಪವಾಗಿದೆ.ಈ ಕವಿತೆಯಲ್ಲಿ ಅದನ್ನೇ ಚಿತ್ರಿಸಲಾಗಿದೆ

ಮೈಯ ಕೊಳದಲಿ ನೆಂದ ಹೆಗಲ ವಸ್ತ್ರದ ತುಂಡು
ಹಣೆಯ ಸುತ್ತಲು ಬಿಗಿದು ಹಣೆಯ ಬರಹವ ತೊರೆದು
ಅರಳಿ ಮರದಡಿಯಲ್ಲಿ ರಂಪಿ ಉಳಿಯನು ಹಿಡಿದು
ಮನಕೆ ಮೋಚಿಯನು ಬಿಗಿಯುವ ಈತ ಬುದ್ಧನಿರಬಹುದು

ಇಲ್ಲಿ ಮತ್ತೆ ಬುದ್ಧನ ವ್ಯಕ್ತಿತ್ವ ಮತ್ತೆ ಮತ್ತೆ ಅವನ ಸರಳ ಸಹಜವಾದ ಗುಣಗಳನ್ನೆ ಕಟ್ಟಿಕೊಡಲಾಗಿದೆ.ಬುದ್ಧ ನೊಂದವರ ಅಸಹಾಯಕರ ಸಾಕಾರ ಮೂರ್ತಿಯೂ ಹೌದು ಅವನನ್ನು ಇಲ್ಲಿ ಹುಡುಕುವ ರೀತಿ ವಿಶಿಷ್ಟವಾದದ್ದು ಬುದ್ಧ ಸಾವಿರಾರು ವರ್ಷಗಳಕಾಲ ತಪಸ್ಸಿಗೆ ಕೂತು ದೇವರನ್ನ ಹುಡುಕುವ ಹಣೆಬರಹದ ಅರ್ಥಹುಡುಕುವ ಪ್ರಯತ್ನ ನಾವು ಬಾಳ ಹಿಂದಿನಿಂದಲೂ ಬುದ್ಧನ ಜೀವನ ಚಿಂತನೆಗಳಿಂದಲೆ ತಿಳಿದಿದ್ದೇವೆ.ಆದರೂ ಈ ವೈಚಾರಿಕವಾದ ಮತ್ತು ವೈಜ್ಞಾನಿಕವಾದ ಈ ಸತ್ಯಾಂಶ ಬಾಹ್ಯಪ್ರಪಂಚಕ್ಕೆ ಅವಶ್ಯವಾಗಿದೆ.ಹೀಗೆ ಸಮಕಾಲೀನ ಸಂದರ್ಭಕ್ಕೆ ಕವಿ ಬುದ್ಧನನ್ನ ಹುಡುಕುವ ಮತ್ತು ಚಿತ್ರಿಸುವ ಸಾಮ್ಯತೆ ನೆನೆಯುವಂತಿದೆ. ಬುದ್ಧ ಎಲ್ಲಾ ಮೌಢ್ಯ ನೋವು ದುಃಖ ಇವುಗಳಿಂದ ಹೊರಬಂದು ತಪಸ್ಸಿಗಾಗಿ ಕೂತವನು ಅರಿವು ಮತ್ತು ಸಿದ್ಧಿಗಳ ಸಂಕೇತವಾದ ಬುದ್ಧ ಜ್ಞಾನವ ಪಡೆದು ಸತ್ಯ ವೈರಾಗ್ಯ ಅಹಿಂಸೆ ಪ್ರೀತಿ ಕರುಣೆಯೆ ನಿಜವಾದ ಧರ್ಮವೆಂದು ತಿಳಿಸಿದವ ಬುದ್ಧ ಅಂದಾನುಕರಣೆ ಶಾಸ್ತ್ರ ಸಂಪ್ರದಾಯ ಹಿಂಸೆ ಅರ್ಥವಿಲ್ಲದ ಒಣ ಆಚಾರಗಳನ್ನ ಪಾಲಿಸಿದ ಮನುಷ್ಯ ಮೋಹ ಮದ ಮತ್ಸರಗಳ ನಡುವೆ ನಾಗರೀಕನಾಗಿಯು ಅಂಧಕಾರದಲ್ಲಿ ಬದುಕ ದೂಡಿದ್ದಾನೆ ಹೀಗಾಗಿಯು ಅವನ ಅರಿವಿನ ಕೊಂಡಿಯನ್ನ ತೆರೆಯುವ ಮತ್ತು ವಿಚಾರವಂತನಾಗುವ ಅರಿವೊಂದು ಇಲ್ಲಿ ಈ ಕಾವ್ಯಗಳು ಬದುಕಿನ ಅನನ್ಯತೆಯನ್ನ ತೋರ್ಪಡಿಸಿವೆ.ಹಾಗೆಯೆ ಮನುಷ್ಯ ಮನುಷ್ಯನಾಗಿ ಬಾಳಬೇಕೆಂಬ ಮನುಷ್ಯನನ್ನು ಮನುಷ್ಯನಾಗಿ ಕಾಣಬೇಕೆಂಬ ಮಾನವ ಪರಿಕಲ್ಪನೆಯೂ ಇಲ್ಲಿದೆ.

ಮಹಾಪುರುಷನೊಬ್ಬನ ಹುಟ್ಟು ಹಾಗೂ ಅವನ ಬದುಕಿನಷ್ಟೆ ಪ್ರಮುಖವಾಗಿ ಆತನ ತತ್ವ ಮತ್ತು ಆದರ್ಶಗಳು ಸಮಾಜದ ಮೇಲೆ ಪರಿಣಾಮವನ್ನುಂಟು ಮಾಡುತ್ತದೆಂದು ಕನ್ನಡ ಕಾವ್ಯ ಪರಂಪರೆಯು ಅದನ್ನ ತೆರೆದಿಡುತ್ತದೆ ಎಂಬ ವಾಸ್ತವನ್ನು ಇಲ್ಲಿ ತಿಳಿಯಬಹುದಾಗಿದೆ.ಈ ಮಾಹಿತಿಯನ್ನು ಇಲ್ಲಿನ ಕಾವ್ಯಗಳು ಸ್ಪಷ್ಟಪಡಿಸಿರುವುದು ಅರಿಯಬಹುದು ಬದುಕು ಮತ್ತು ಬದುಕಿನೊಟ್ಟಿಗೆ ಕಟ್ಟಿಕೊಂಡ ಆದರ್ಶಗಳನ್ನು ಈ ಗ್ರಹಿಕೆಯ ಹಿನ್ನೆಲೆಯಲ್ಲಿ ಅದು ದಕ್ಕಿದೆ.ಇಲ್ಲಿ ಯಲ್ಲಪ್ಪ ನವರ ಕವಿತೆ ಬುದ್ಧನ ಬಗೆಗಿನ ಕೆಲವು ಮುಕ್ತಕಗಳು. ಬುದ್ಧನ ಬಗೆಗೆ ಕಟ್ಟಿಕೊಡುವ ಚಿತ್ರಣ ಬದುಕನ್ನು ಬುದ್ಧ ಸ್ವಿಕರಿಸಿರುವ ಪರಿ ಮಹಾನ್ ಪುರುಷನ ಶ್ರೇಷ್ಠ ನಡೆಯೊಂದನ್ನ ಕವಿತೆ ಅನಾವರಣ ಗೊಳಿಸಿದೆ ಮತ್ತು ಇದು ಆ ಕವಿತೆಯ ಜೀವಂತಿಕೆಯು ಹೌದು.

ದುಡಿಮೆಯೊಳಗಿನ
ದೇವರನ್ನು ತೋರಿಸಿದ ಬುದ್ಧ
ಶ್ರಮಜೀವಿಗಳ ದೇವರಾಗಿದ್ದ
ಆಲಸ್ಯದೊಳಗಿನ ದೆವ್ವವನ್ನು
ಓಡಿಸಿದ ಬುದ್ಧ

ಸೋಮಾರಿಗಳ ಪಾಲಿನ
ಮಂತ್ರವಾದಿಯಾಗಿದ್ಧ

ಕಾಯಕ ಮಹತ್ವದ ಮುಖವೊಂದನ್ನ ಇಲ್ಲಿ ತೆರೆದಿಡಲಾಗಿದೆ ಕಾಯಕವೆ ಕೈಲಾಸ ಎನ್ನುವ ಮಾತು ಕನ್ನಡ ವಚನ ಪರಂಪರೆಯ ಆಶಯವೆ ಆಗಿತ್ತು ಇದನ್ನೆ ಕೇಂದ್ರಿಕರಿಸಿ ಕೊಂಡ ಕನ್ನಡ ಕಾವ್ಯಪರಂಪರೆ ಕಾಯಕದ ಬಗ್ಗೆ ಅನೇಕ ಹಿತನುಡಿಗಳವೆ ಮತ್ತು ಶ್ರೇಷ್ಠತೆಯ ಭಾವವೂ ಅಲ್ಲಿ ಅಡಗಿದೆ.ಹಾಗಾಗಿ ನಮ್ಮೋಳಗಿನ ಆಲಸ್ಯವೊಂದು ನಶಿಸಿ ಕ್ರಿಯಾಶೀಲ ಗೊಳ್ಳಬೇಕಿದೆ ಮತ್ತು ನಮ್ಮೊಳಗಿನ ಬುದ್ಧನೆನ್ನುವ ಸಾಕ್ಷಿಪ್ರಜ್ಞೆಯ ಎಚ್ಚರಿಕೆಯೊಂದನ್ನ ಎಚ್ಚರಿಸ ಬೇಕಿದೆ ದೇವರ ಕಲ್ಪನೆ ಇಂದು ವ್ಯಾಪಕವಾಗಿ ಪಸರಿಸಿದ್ದರು ಇಂದು ಅವೆಲ್ಲವು ಬುದ್ಧನನ್ನ ಅರಿತುಕೊಂಡಾಗ ತಲೆಕೆಳಗಾಗಿ ವಾಸ್ತವತೆಯ ಕಡೆಗೆ ಸಾಗಬೇಕಿದೆ ಜೀವನದ ನಿಜಾಂಶಗಳನ್ನು ಅರಿಯಬೇಕಿದೆ ಎಂಬುವ  ಸಂದೇಶವನ್ನು ನೀಡುತ್ತದೆ.ಒಟ್ಟಾರೆಯಾಗಿ ಜಗತ್ತಿನ ಬೆಳಕಿಗಾಗಿ ಬೆಳಕೊಂದನ್ನ ಹುಡುಕಿ ಬೆಳಕಕೊಟ್ಟ ಮಹಾಪುರುಷರಲ್ಲಿ ಬುದ್ಧ ಪ್ರಮುಖ ಆತನ ವಿಚಾರಧಾರೆಗಳು ನಮ್ಮೊಳಗಿನ ಎಚ್ಚರಿಕೆಯೊಂದನ್ನ ಸೃಷ್ಠಿಸಿದೆ, ಹಾಗಗಿ ಇಲ್ಲಿ ಬುದ್ಧ ದೈಹಿಕವಾಗಿ ಇಲ್ಲದೆ ಇದ್ದರು ಆತನ ಬದುಕಿನ ತತ್ವಗಳು ಸರ್ವಕಾಲಿಕವಾದದ್ದು ಮತ್ತು ಜಗತ್ತಿಗೆ  ಬುದ್ಧನ ಬದುಕಿನ ತತ್ವಗಳು ಆದರ್ಶವಾದದ್ದು.

## ಕೊನೆ ಟಿಪ್ಪಣಿ

೧.ಗಂಗಾವತರಣ:ದ.ರಾ ಬೇಂದ್ರೆ ಮನೋಹರ ಗ್ರಂಥ ಪ್ರಕಾಶನ ಸಮಿತಿ ಧಾರವಾಡ ೧೯೬೯ ಪುಟ-೪೧
೨,ಉರಿವ ಕೆಂಡದ ಸೆರಗು:ಡಾ.ಎಚ್ ಲಕ್ಷ್ಮೀನಾರಯಣ ಶಕ್ತಿ ಪ್ರಿಂಟರ್ಸ್ ಬೆಂಗಳೂರು ೨೦೧೩.ಪುಟ:೩೦
೩.ಕಣ್ಣಪಾಪೆಯ ಬೆಳಕು:ಟಿ.ಯಲ್ಲಪ್ಪ,ಬೆಳಕು ಪ್ರಕಾಶನ ೨೦೧೬.ಪುಟ:೭೨

## ಪರಾಮರ್ಶನ ಗ್ರಂಥಗಳು


೧.ಗಂಗಾವತರಣ:ದ.ರಾ ಬೇಂದ್ರೆ ಮನೋಹರ ಗ್ರಂಥಪ್ರಕಾಶನ ಸಮಿತಿ ಧಾರವಾಡ ೧೯೬೯
೨,ಉರಿವ ಕೆಂಡದ ಸೆರಗು:ಡಾ.ಎಚ್ ಲಕ್ಷ್ಮೀನಾರಯಣ ಶಕ್ತಿ ಪ್ರಿಂಟರ್ಸ್ ಬೆಂಗಳೂರು ೨೦೧೩
೩.ಕಣ್ಣಪಾಪೆಯ ಬೆಳಕು:ಟಿ.ಯಲ್ಲಪ್ಪ,ಬೆಳಕು ಪ್ರಕಾಶನ ಬೆಂಗಳೂರು ೨೦೧೬
೪.ಕನ್ನಡ ಸಾಹಿತ್ಯ ಸಂಸ್ಕೃತಿಕೋಶ:ಡಾ.ಚಿ.ಸಿ ನಿಂಗಣ್ಣ,ಶ್ರೀ ಸಿದ್ಧಲಿಂಗೇಶ್ವರ ಪ್ರಕಾಶನ ಕಲಬುರಗಿ ೨೦೧೭